ಎಂ.ವಿ.ಸಿಃ 1052/2023
ಪಿ.ಡಬ್ಲ್ಯೂ : 02

ದಿನಾಂಕ 23-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮೇಡಂ ಎ.ಎಸ್ ವಕೀಲರವರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

| | |
|---|---|
| ನಿಪಿ-26 | ಕೇಸ್ ಶೀಟ್, |
| ನಿಪಿ-27 | 3 ಕ್ಷ್ಯಾ ಕಿರಣಗಳು |

ಸಾಕ್ಷಿಯವರು 2 ದಾಖಲೆಗಳನ್ನು ನೋಡಿ ಇವುಗಳು ನಾನು ನೀಡಿರುವಂತಹ ಚಿಕಿತ್ಸೆ ಪ್ರಮಾಣ ಪತ್ರ ಹಾಗೂ ಅಂಗನ್ಯೂನ್ಯತೆ ಪ್ರಮಾಣ ಪತ್ರವೆಂದು ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ 10 ಮತ್ತು ನಿಪಿ 11 ಎಂದು ಗುರುತಿಸಿದ್ದು, ಸಾಕ್ಷಿಯವರು ಅವುಗಳಲ್ಲಿರುವ ಸಹಿಯನ್ನು ನನ್ನ ಸಹಿ ಎಂದು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.10(ಎ) ಮತ್ತು 11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಮೇಡಂ. ಎಲ್ ಎಸ್ ಎ ವಕೀಲರಿಂದಃ**

ಅರ್ಜಿದಾರರನ್ನು ಮೊದಲು ಯಾರು ಪರೀಕ್ಷೆ ಮಾಡಿರುವುದು ಎಂದರೆ ನಾನೇ ಪರೀಕ್ಷೆ ಮಾಡಿರುತ್ತೇನೆ . ಅರ್ಜಿದಾರರ ಸಂಪೂರ್ಣ ಚಿಕಿತ್ಸೆ ಮುಗಿದ ನಂತರವೇ ನಿಮ್ಮ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುವುದು ಎಂದರೆ ಹೌದು . ಅರ್ಜಿದಾರರು ನಿಮ್ಮ ಆಸ್ಪತ್ರೆಗೆ ಯಾವ ದಿನದಂದು ಒಳರೋಗಿಯಾಗಿ ದಾಖಲಾದರು ಎಂದರೆ ದಿ. 21-03-2023 ರಂದು ದಾಖಲಾದರು . ಅರ್ಜಿದಾರರು ಎಷ್ಟು ಬಾರಿ ಒಳರೋಗಿಯಾಗಿ ದಾಖಲಾಗಿರುತ್ತಾರೆ ಎಂದರೆ 3 ಬಾರಿ ಒಳರೋಗಿಯಾಗಿ ದಾಖಲಾಗಿರುತ್ತಾರೆ . ಅರ್ಜಿದಾರರಿಗೆ ಯಾವುದೇ ರೀತಿಯ ಚಿಕಿತ್ಸೆಯು ಬಾಕಿ ಇರುವುದಿಲ್ಲ ಎಂದರೆ ಹೌದು. ಅರ್ಜಿದಾರರ ಕಾಲನ್ನು ಕತ್ತರಿಸಬೇಕು ಎನ್ನುವ ನಿರ್ಧಾರವನ್ನು ಯಾರು

ಮಾಡಿದರು ಎಂದರೆ ಅರ್ಜಿದಾರರಿಗೆ ಚಿಕಿತ್ಸೆ ನೀಡುತಿದ್ದ ವೈದ್ಯಕೀಯ ತಂಡವು ನಿರ್ಧಾರ ಮಾಡಿತು . ಅರ್ಜಿದಾರರ ಕಾಲನ್ನು ಕತ್ತರಿಸುವ ನಿರ್ಧಾರವನ್ನು ಯಾವ ಕಾರಣಕ್ಕಾಗಿ ಮಾಡಿರುತ್ತೇವೆ ಎನ್ನುವ ವಿವರವನ್ನು ನಿಪಿ26 ರಲ್ಲಿ ನಮೂದು ಮಾಡಿರುತೀರಾ ಎಂದರೆ ಹೌದು . ದಿ. 22-03-2023 ರಂದು ಕಾಲನ್ನು ಕತ್ತರಿಸುವ ನಿರ್ಧಾರ ಮಾಡಿರುತ್ತೇವೆ ಆ ಬಗ್ಗೆ ಪುಟ ಸಂಖ್ಯೆ 100 ಮತ್ತು 20 ರಲ್ಲಿ ನಮೂದು ಮಾಡಿರುತ್ತೇವೆ . ಅರ್ಜಿದಾರರಿಗೆ ಸರಿಯಾದ ಚಿಕಿತ್ಸೆಯನ್ನು ನೀಡದೇ ಇದ್ದ ಕಾರಣ ಅವರ ಕಾಲಿನಲ್ಲಿ ಕೀವು ಹೆಚ್ಚಿನ ಪ್ರಮಾಣದಲ್ಲಿ ತುಂಬಿಕೊಂಡ ಕಾರಣ ಕಾಲನ್ನು ಕತ್ತರಿಸಬೇಕಾದ ಪರಿಸ್ಥಿತಿ ಉಂಟಾಯಿತು ಎಂದರೆ ಸರಿಯಲ್ಲ. ಕಾಲಿಗೆ ಕೀವು ತುಂಬಿಕೊಂಡ ಕಾರಣದಿಂದಾಗಿ ಕಾಲನ್ನು ಕತ್ತರಿಸುವ ಪರಿಸ್ಥಿತಿ ಉಂಟಾಗಿದ್ದರಿಂದ ಅವರಿಗೆ ಹೆಚ್ಚಿನ ಅಂಗನೂನ್ಯತೆ ನೀಡಬೇಕಾಯಿತು ಎಂದರೆ ಅಂತಹ ಪರಿಸ್ಥಿತಿ ಉಂಟಾಗಿಲ್ಲ. ಅರ್ಜಿದಾರರು ಅಪಘಾತಕ್ಕೆ ಒಳಗಾದ ಸಮಯದಲ್ಲಿ ಏನು ಕೆಲಸವನ್ನು ಮಾಡುತಿದ್ದರು ಎನ್ನುವ ಬಗ್ಗೆ ನಿಪಿ26 ರಲ್ಲಿ ನಮೂದು ಮಾಡಲಾಗಿದೆಯೇ ಎಂದರೆ ಇಲೆಕ್ಟ್ರೀಶನ್ ಕೆಲಸ ಮಾಡುತಿದ್ದರು. ಅರ್ಜಿದಾರರಿಗೆ ಅವರ ವೃತ್ತಿಯನ್ನು ಆಧರಿಸಿ ಅಂಗನೂನ್ಯತೆಯ ಪ್ರಮಾಣಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಯಾವ ಆದಾರದ ಮೇಲೆ ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ನೀಡಿರುವುದು ಎಂದರೆ ನನ್ನ ಮುಖ್ಯವಿಚಾರಣೆಯಲ್ಲಿ ನಮೂದು ಮಾಡಿರುವ ಭಾರತ ಸರ್ಕಾರದ ಗೆಜೆಟೆಡ್ ನೋಟಿಫಿಕೇಶನ್‌ಗೆ ಅನುಗುಣವಾಗಿ ನೀಡಿರುತ್ತೇನೆ. ನೀವು ನೀಡಿರುವ ಅಂಗನ್ಯೂನ್ಯತೆಯು ದೇಹದ ಆ ಭಾಗಕ್ಕೆ ಮಾತ್ರ ಆಗಿರುತ್ತದೆ ವಿನಹಃ ಸಂಪೂರ್ಣ ದೇಹಕ್ಕೆ ಆಗಿರುವುದಿಲ್ಲ ಎಂದರೆ ಹೌದು. ಅಂಗನ್ಯೂನ್ಯತೆಯನ್ನು ನಿರ್ಧಾರ ಮಾಡಿರುವ ಲೆಕ್ಕಚಾರಗಳ ಬಗ್ಗೆ ನಿಪಿ 26 ರಲ್ಲಿ ನಮೂದು ಮಾಡಿದ್ದೀರಾ ಎಂದರೆ ಹೌದು . ಅರ್ಜಿದಾರರು ನಿಮ್ಮ ಆಸ್ಪತ್ರೆಗೆ ಯಾವಾಗ ಕೊನೆಯ ಬಾರಿ ಬಂದಿರುತ್ತಾರೆ ಮತ್ತು ಅಂಗನೂನ್ಯತೆಯ ಪ್ರಮಾಣ ಪತ್ರವನ್ನು ಪಡೆಯಲು ಬಂದಿರುವುದೇ ದಿ. 7-11-2023 ರಂದು ಅಂಗನೂನ್ಯತೆ ಪ್ರಮಾಣ ಪತ್ರ ಪಡೆಯಲು ಬಂದಿರುತ್ತಾರೆ . ಅರ್ಜಿದಾರರಿಗೆ ಆರೋಗ್ಯ ಕಾರ್ಡ್ ನ ಸವಲತ್ತು ಇದ್ದ ಬಗ್ಗೆ ನಿಪಿ 26 ರಲ್ಲಿ ನಮೂದು ಮಾಡಿರುತೀರಾ ಎಂದರೆ ದಾಖಲೆಯ ಅನುಸಾರ ನಗದು ರೂಪದಲ್ಲಿ ಪಾವತಿಸಿರುತ್ತಾರೆ . ಅರ್ಜಿದಾರರಿಗೆನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ

ಹೇಳಿರುವಷ್ಟು ಪ್ರಮಾಣ ಅಂಗನ್ಯೂನ್ಯತೆ ಯು ಇಲ್ಲದೇ ಇದ್ದರೂ ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ದೊರಕಿಸಿಕೊಡುವ ಉದ್ದೇಶದಿಂದ ಹೆಚ್ಚಿನ ಪ್ರಮಾಣದ ಅಂಗನ್ಯೂನತೆ ಪ್ರಮಾಣ ಪತ್ರ ನೀಡಿ ಅದಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತಿದ್ದೀರಾ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.